Sri K. MALLAPPA.—Lime-stone for cement industry; and iron industry; china-clay for porcelain factory; gold for preparing Jerry; Feldspar in Porcelain Factory, Qartz in Porcelain Factory and manufacture of glass also Fullers Earth in Refinery.

ಶ್ರೀ ಗಂಗಾಧರ ನಾಮೋಷಿ.—ಫುಲ್ಲರ್ಸ್‌ಅರ್ತ್ ಏರಿಯಾ ಎಷ್ಟಿದೆ ?

ಶ್ರೀ ಕೆ. ಮಲ್ಲಪ್ಪ.—ಕೊರವಿ ಮತ್ತು ಚಿಂಡೋಳಿ ತಾಲ್ಲೂಕಿನಲ್ಲಿ ಸಿಕ್ಕಿದೆ. ಏರಿಯಾ ವಿವರ ನನ್ನಲ್ಲಿಲ್ಲ.

ಶ್ರೀ ಗಂಗಾಧರ ನಾಮೋಷಿ.—ಫುಲ್ಲರ್ಸ್‌ಅರ್ತ್ ಬಗ್ಗೆ ರಾಜಾಸ್ಥಾನ ಮತ್ತು ಆಂಧ್ರಪ್ರದೇಶದಲ್ಲಿ ಯಾವ ಪಾಲಸಿ ಇದೆಯೋ ಅದನ್ನೇ ಇಲ್ಲಿಯೂ ಅನುಸರಿಸುತ್ತಿದ್ದೀರೋ, ಅಥವಾ ನಿಮ್ಮ ಪಾಲಸಿ ಬೇರೆ ಇದೆಯೋ ?

ಶ್ರೀ ಕೆ. ಮಲ್ಲಪ್ಪ.—ಇದರಲ್ಲಿ ಯಾವ ಪಾಲಸಿಯೂ ಇಲ್ಲ. ಯಾವುದನ್ನು ಉಪಯೋಗಕ್ಕೆ ತರಬೇಕೊ ಅದನ್ನು ಉಪಯೋಗಕ್ಕೆ ತರುವ ಪ್ರಯತ್ನ ಮಾಡುತ್ತೇವೆ. It is a minor mineral.

Extent of Sandalwood growing land in the State.

*Q.—366. Sri S. SUBBAYYA NAYAK (Sullia).—

Will the Government be pleased to state :—

(*a*) the extent of land in which sandalwood is growing in the State (district-war figures may be furnished);

(*b*) the difficulties that are in the way of framing uniform laws in respect of occupational rights of sandalwood trees or their produce;

(*c*) the profit derived from the sandalwood trees during the past years, *i. e.*, 1960, 1961 and 1962 ?

A.—Sri B. RACHIAH (Minister for Forests and Fisheries).—

(*a*) This information is not available as sandalwood trees are scattered all over the State and survey of the same has not been made.

(*b*) Nil, in view of the passing of the uniform Mysore Forest Bill, 1963 recently.

(*c*) 1959-60 ... Rs. 91,42,986
1960-61 ... Rs. 1,31,40,139
1961-62 ... Rs. 1,06,75,529

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಗಂಧದ ಮರ ತನ್ನಷ್ಟಕ್ಕೆ ತಾನೆ ಬೆಳೆಯಬೇಕೊ, ಟೀಕ್ ಮತ್ತು ರಬ್ಬರ್‌ನಂತೆ ಬೆಳೆಸುವ ಅಗತ್ಯವಿಲ್ಲವೊ ಅಥವಾ ಬೆಳೆಸುವುದಕ್ಕೆ ಸಾಧ್ಯವಿಲ್ಲವೊ ?

† ಶ್ರೀ ಬಿ. ರಾಚಯ್ಯ.—ಬೆಳಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಹಾಗೆ ಬೆಳೆಸುವುದಕ್ಕೆ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರ ?

ಶ್ರೀ ಬಿ. ರಾಚಯ್ಯ.—ಎಲ್ಲೆಲ್ಲ ಹೊಸದಾಗಿ ಅರಣ್ಯ ಪ್ರದೇಶವನ್ನು ಬೆಳೆಸುತ್ತಾ ಇದ್ದೇವೆಯೊ ಅಂಥ ಕಡೆ ಗಂಧದ ಮರದ ಬೀಜಗಳನ್ನು ಚೆಲ್ಲುತ್ತಾ ಇದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗಂಧದ ಮರಗಳನ್ನು ಡಿಸ್ಪೆಂಕ್ಸ್ ಫಾರೆಸ್ಟ್ ಆಫೀಸು ಕಾಂಪೌಂಡುಗಳಲ್ಲಿ ಒಣಗಿಸುತ್ತಾ ಇದ್ದಾರೆ. ಹಾಗೆ ಒಣಗಿಸುವುದರಿಂದ ಅವುಗಳಲ್ಲಿರತಕ್ಕಂಥ ಎಣ್ಣೆ ಕಡಮೆಯಾಗುವುದಿಲ್ಲವೆ ! ಈ ತರಹ ಬೇಕಾದಷ್ಟು ದಿವಸ ಬಿಟ್ಟು ಹರಾಜು ಹಾಕುವುದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಗಂಧದಮರ ಒಣಗಿಸಿದಷ್ಟೂ ಆಯಿಲ್‌ಕಂಟೆಂಟ್ಸ್ ಕಡಮೆಯಾಗುವುದಿಲ್ಲ. ಅದರಲ್ಲಿರುವ ನೀರಿನ ಭಾಗ ಮಾತ್ರ ಕಡಮೆಯಾಗುತ್ತದೆನ್ನುವುದು ತಜ್ಞರ ಅಭಿಪ್ರಾಯ. ಮೈಸೂರು ಸಂಸ್ಥಾನದಲ್ಲಿ ಗಂಧದ ಮರಗಳನ್ನು ಹರಾಜು ಇಡುತ್ತಿಲ್ಲ. ಅವುಗಳನ್ನು ನಮ್ಮ ಸರಕಾರಿ ಕಾರ್ಖಾನೆಗಳಿಗೆ ಮಾತ್ರ ಒದಗಿಸುತ್ತಿದ್ದೇವೆ.

Sri B. R. SUNTHANKAR.—May I know whether there is any register maintained showing the number of sandalwood trees that are grown in the State, or any counting done?

Sri B. RACHIAH.—Enumeration is just now started; in two or three areas the work is under progress.

Sri B. R. SUNTHANKAR.—What is the method to detect when and how and where sandalwood trees in private lands are cut clandestinely?

Sri B. RACHIAH.—There is a squad and there are departmental officers who will watch.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಮೂರು ವರ್ಷಗಳಲ್ಲಿ ಗಂಧದಮರದಿಂದ ಬಂದಿರುವ ಆದಾಯ ಕೊಟ್ಟಿದ್ದೀರಿ? ಇದರಲ್ಲಿ ಮರದ ಎಣ್ಣೆಯಿಂದ ಬಂದಿರತಕ್ಕಂಥ ಆದಾಯವೂ ಸೇರಿದೆಯೊ? ಎಣ್ಣೆಯಿಂದ ಬೇರೆ ಬಂದದ್ದೆಷ್ಟು?

ಶ್ರೀ ಬಿ. ರಾಚಯ್ಯ.—ಕೇವಲ ಮರದಿಂದ ಬಂದಿರತಕ್ಕಂಥದ್ದು. ಎಣ್ಣೆಯಿಂದ ಬಂದದ್ದು ಇಂಡಸ್ಟ್ರಿ ಡಿಪಾರ್ಟ್‌ಮೆಂಟಿನ ಎರಡು ಫ್ಯಾಕ್ಟರಿಗಳಿಂದ. ಆ ಉತ್ತರ ನನ್ನಲ್ಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಬರೀ ಮರದಿಂದ ಆದರೆ, ಇಲ್ಲಿಸಿಟ್ ಕಟ್ಟಿಂಗ್ ಯಾವ ಏರಿಯಾದಲ್ಲಿದೆ? ಅದರಿಂದ ಬಂದ ಹಣವೆಷ್ಟು?

ಶ್ರೀ ಬಿ. ರಾಚಯ್ಯ.—ಆ ವಿವರ ಇವೊತ್ತು ನನ್ನ ಹತ್ತಿರ ಇಲ್ಲ.

ಶ್ರೀ ಗಾಂಜಿ ವೀರಪ್ಪ.—ಗಂಧದ ಮರಕ್ಕೆ ಸ್ಪೈಕ್ ಎಂಬ ಡಿಸೀಸ್ ಬಂದಿದೆ ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿದಿದ್ದಾರೆಯೆ?

ಶ್ರೀ ಬಿ. ರಾಚಯ್ಯ.—ಬೆಂಗಳೂರಿನಲ್ಲಿರುವ ರಿಸರ್ಚ್ ಸ್ಟೇಷನ್ನಿನಲ್ಲಿ ಸಂಶೋಧನೆ ನಡೆಸುತ್ತಾ ಇದ್ದಾರೆ. ಕಳೆದ ವರ್ಷ ತಾತ ಇನ್‌ಸ್ಟಿಟ್ಯೂಟಿಗೆ ಎರಡು ತುಂಡು ಕೊಟ್ಟು ರಿಸರ್ಚ್ ಮಾಡಿಸುತ್ತಾ ಇದ್ದೇವೆ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Increasing the number of working basins in Government Silk Filature in the State.

*Q.—325. Sri M. C. BASAPPA (Chamarajanagar).—

Will the Government be pleased to state:—

(*a*) whether they intend increasing the number of working basins in Government Silk Filature in the State;

(*b*) whether they intend starting reeling in the Filatures which have been closed such as one at Kuderu in Chamarajanagar Taluk;

(*c*) if so, when;

(*d*) whether in view of the need for parachute silk for defence purpose they intend regulating the price of cocoon raw silk and other silk products?

*A.—Sri B. RACHIAH (Minister for Forests and Fisheries).—

(*a*) Yes.